ದಿನಾಂಕಃ26-03-2022 ರಂದು ಸಾಕ್ಷಿಯನ್ನು ಮುಂದುವರೆದ ಮುಖ್ಯ ವಿಚಾರಣೆಗಾಗಿ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ 1 ಮತ್ತು 5 ನೇ ಎದುರುದಾರರ ಪರವಾಗಿಃ ಶ್ರೀ ಎಸ್.ಎ.ಎಚ್. ವಕೀಲರಿಂದಃ–**

1. ನಾನು ಈ ದಿನ ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಈ ಕೆಳಗಿನಂತೆ ನಿಶಾನೆಗೊಳಿಸಲಾಯಿತು.

| | |
|---|---|
| Ex.R.1 | Reply by the Head Master to the leave application of Banakar dated:8/6/2010 with RPAD Cover. |
| Ex.R.2 | E.L. Form. |
| Ex.R.3 | Office copy of Letter of A.A.Banakar addressed to Head Master National Urdu High School Masur along with leave application dated:28/5/2010. |
| Ex.R.4 | Registered notice issued by the Secretary Millat Education Society Masur calling the explanation of Bankar dated:1/7/2010. |
| Ex.R.5 | Second show cause notice by Secretary to A.A.Bankar dated:15/7/2010 by RPAD Post. |
| Ex.R.6 | Notice dated:27/9/2010 to A.A.Banakar by Secretary of the Management for unauthorized absence. |
| Ex.R.7 | Notice dated:2/11/2010 by RPAD for unauthorized absence of A.A. Bankar by Secretary of the Management. |
| Ex.R.8 | Notice through paper publication in "Kannada Prabha" daily newspaper published on 20/11/2010. |
| Ex.R.9 | True copy of resolution of the Board of Management dated:30/11/2010. |
| Ex.R.10 | Letter of Commissioner publication Instructions addressed to DDP Haveri District with a copy to President of the Managerment dated:28/02/2011. |
| Ex.R.11 | Registered notice to appellant A.A.Banakar respecting domestic enquiry communicating the charges against him as per Annexure I, II, III and IV along with postal receipts and acknwledgment dated:29/07/2011. |
| Ex.R.12 | Annexures 1 to 4. |

| | |
|---|---|
| Ex.R.13 | Appointing Shri.Umesh T.Bhatakke Adv. as enquiry officer to conduct domestic enquiry against Shri. A.A.Bankar issued by Secretary of the Management dated:01/12/2011. |
| Ex.R.14 | Letter to commissioner of Public Instructions Dharwad by Secretary of the Management dated:20/12/2011. |
| Ex.R.15 | Notice by enquiry officer to A.A.Banakar to appear before him dated:15/12/2011. |
| Ex.R.16 | Another notice by enquiry officer to A.A.Banakar dated:28/12/2011. |
| Ex.R.17 | Enquiry Report. |
| Ex.R.18 | Show cause notice dated:24/02/2012 issued by RPAD Post enclosing the enquiry report of the enquiry officer dated:20/01/2012. |
| Ex.R.19 | Order of the Secretary of Millat Education Society Masur dismissing the appellant from service dated:22/03/2012 under copy to the officers of the Education Department. |

**<u>ಪಾಟೀ ಸವಾಲುಃ ಮೇಲ್ಮನವಿದಾರರ ಪರಃ ಶ್ರೀ ಎಸ್.ಎಸ್.ಜಿ. ವಕೀಲರಿಂದ: -</u>**

3. ನಾನು ಸದರಿ ಸಂಸ್ಥೆಯ ಕಾರ್ಯದರ್ಶಿ ಅಂತಾ ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಅಂದರೆ ಸಾಕ್ಷಿಯು ಠರಾವು ಇದೆ ಅಂತಾ ಹೇಳುತ್ತಾರೆ. ಅದನ್ನು ಹಾಜರುಪಡಿಸಲು ತೊಂದರೆ ಇಲ್ಲ. ಈ ಪ್ರಕರಣದಲ್ಲಿ ನಾನು ಪಕ್ಷಗಾರನಾಗಿ ಇರುವುದಿಲ್ಲ ಅಂದರೆ ಸಾಕ್ಷಿಯು ನಾನು ಸಂಸ್ಥೆಯ ಕಾರ್ಯದರ್ಶಿಯಾಗಿರುತ್ತೇನೆ.

4. ಮೇಲ್ಮನವಿದಾರ ನಮ್ಮ ಸಂಸ್ಥೆಗೆ ಡೊನೇಶನ್ ನೀಡಲಿಲ್ಲ ಎಂಬ ಕಾರಣಕ್ಕಾಗಿ ಆತನನ್ನು ಕೆಲಸದಿಂದ ವಜಾ ಮಾಡಿದ್ದೀರಿ ಅಂದರೆ ಸರಿಯಲ್ಲ. ಸದರಿ ಸಂಸ್ಥೆ ಪ್ರಾರಂಭವಾದಾಗಿನಿಂದ ಮೇಲ್ಮನವಿದಾರ ಕನ್ನಡದ ಶಿಕ್ಷಕನಾಗಿ ವಜಾ ಆಗುವವರೆಗೆ ಕೆಲಸ ನಿರ್ವಹಿಸುತ್ತಿದ್ದ ಅಂದರೆ ಸರಿಯಲ್ಲ,

ಆತ ಸಂಸ್ಥೆ ಪ್ರಾರಂಭವಾದಾಗಿನಿಂದ ಅಲ್ಲ ಅಂತಾ ಸಾಕ್ಷಿ ಹೇಳುತ್ತಾರೆ. ಮೇಲ್ಮನವಿದಾರನಿಗೆ ಯಾವುದೇ ಕಾನೂನುಬದ್ಧ ನೋಟೀಸ್ ಕೊಡದೇ ಮತ್ತು ಆತನಿಗೆ ಅವಕಾಶ ನೀಡದೇ ಆತನನ್ನು ಏಕತರ್ಫಿ ವಜಾ ಆದೇಶ ಮಾಡಲಾಗಿದೆ ಅಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ 4 ನೇ ಪ್ಯಾರಾದಲ್ಲಿ ಹೇಳಿದಂತೆ ಮೇಲ್ಮನವಿದಾರನಿಗೆ ಕೆಲಸಕ್ಕೆ ಹಾಜರಾಗುವಂತೆ ದಿನಾಂಕಃ20/11/2010 ರಂದು ಕನ್ನಡ ಪ್ರಭ ದಿನಪತ್ರಿಕೆಯಲ್ಲಿ ನೋಟೀಸ್‌ನ್ನು ನೀಡಲೇ ಇಲ್ಲ ಮತ್ತು ಅದು ಆತನಿಗೆ ತಲುಪಿಲ್ಲ ಅಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದ 5 ನೇ ಪ್ಯಾರಾದಲ್ಲಿ ತಿಳಿಸಿದ ಮೇಲ್ಮನವಿ ದಾಖಲಿಸುವ ಅವಧಿ ಬಗ್ಗೆ ನಿಖರವಾದ ಮಾಹಿತಿ ಇರುವುದಿಲ್ಲ. ನಾನು ಈ ಪ್ರಕರಣದಲ್ಲಿ ಪಕ್ಷಗಾರನಲ್ಲ ಮತ್ತು ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರದಿದ್ದರೂ ಸಹಿತ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಮ್ಮ ಸಂಸ್ಥೆಯ ವಿರುದ್ಧ ಹಿರೇಕೆರೂರು ನ್ಯಾಯಾಲಯದಲ್ಲಿ ಇನ್ನೊಂದು ಕಮೀಟಿಯವರು ಸಿವಿಲ್ ಮಿಸ್ ನಂ.2/2016 ದಾಖಲು ಮಾಡಿದ್ದು, ಚಾಲ್ತಿಯಲ್ಲಿದೆ ಅಂದರೆ ಸರಿ. ಇನ್ನೊಂದು ಕಮೀಟಿಯವರು ಮೇಲ್ಮನವಿದಾರನನ್ನು ಶಿಕ್ಷಕನಾಗಿ ನೇಮಿಸಿಕೊಂಡಿದ್ದ ರಿಂದ ಮತ್ತು ಸದರಿ ಸಿವಿಲ್ ಮಿಸ್ ನಂ.2/2016 ದಾಖಲು ಮಾಡಿದ್ದರಿಂದ, ಮೇಲ್ಮನವಿದಾರನು ತಡವಾಗಿ ಈ ಪ್ರಸ್ತುತ ಪ್ರಕರಣ ದಾಖಲು ಮಾಡಿರುತ್ತಾನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ** (ಈ ಹಂತದಲ್ಲಿ ಮೇಲ್ಮನವಿದಾರರ ಪರ ವಕೀಲರು ಸದರಿ ಸಾಕ್ಷಿಯ ಅಧಿಕಾರದ ಬಗ್ಗೆ ತಕರಾರು ಮಾಡಿದ್ದರಿಂದ ದಾಖಲೆಗಳನ್ನು ಹಾಜರುಪಡಿಸುವುದಾಗಿ ಸಮಯ ಕೋರುತ್ತಾರೆ, ಆದ್ದರಿಂದ ಮರು ವಿಚಾರಣೆ ಮುಂದೂಡಲಾಗಿದೆ.)

**(**ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು**.)**
ಓ ಹೇ ಕೇ ಸರಿ ಇದೆ**.**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**,**
ಹಾವೇರಿ**.**